**ಎಮ್ ವಿ ಸಿ ನಂಃ 170/2025**

**ಪಿ.ಡಬ್ಲ್ಯೂಃ1,**

**ಸಾಕ್ಷಿಯನ್ನು ದಿನಾಂಕ : 13-02-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟಿ ಸವಾಲು: ಶ್ರೀ. ಎಸ್. ಎಸ್. ಎ. ಎದುರುದಾರ ಪರ ವಕೀಲರಿಂದ :**

ಅರ್ಜಿದಾರಳಿಗೆ ನಾನು ಚಿಕಿತ್ಸೆ ನೀಡಿಲ್ಲಾ. ನಾನು ನಿಪಿ-8 ರಲ್ಲಿ ಪ್ರತಿ ಗಾಯಕ್ಕೆ ಎಷ್ಟು ನ್ಯೂನ್ಯತೆ ಇದೆ ಎಂದು ನಿಖರವಾಗಿ ನಮೂದಿಸಿಲ್ಲಾ ಎಂದರೆ ಸಾಕ್ಷಿ ನಾನು ಕೇಂದ್ರ ಸರಕಾರದ ನಿಯಮಾವಳಿ ಪ್ರಕಾರ ನ್ಯೂನ್ಯತೆಯನ್ನು ನಮುದಿಸಿದ್ದೇನೆ ಎಂದು ನುಡಿಯುತ್ತಾರೆ. ಗಾಯಗಳು ವಾಸಿ ಆಗಿವೆ ಆದರೆ malunited ಇದೆ ಎಂದು ನುಡಿಯತ್ತಾರೆ. ಮುಂದಿನ ದಿನಗಳಲ್ಲಿ ಆ ವ್ಯಕ್ತಿಯ ಕೆಲಸ ಕಾರ್ಯಗಳಿಗೆ ತನ್ನ ಸಾಮರ್ಥ್ಯ ಸುಧಾರಣೆ ಆಗಬಹುದು ಎಂದರೆ ಸರಿಯಲ್ಲ. ಮುಂದಿನ ದಿನಗಳಲ್ಲಿ ಆ ವ್ಯಕ್ತಿ ದಿನ ನಿತ್ಯ ಚಟುವಟಿಕೆಗಳನ್ನು ಸುಗಮವಾಗಿ ಮಾಡಿಕೊಳ್ಳಲು ಸಾಮ್ಯರ್ಥ್ಯ ಆಗುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು ಹೆಚ್ಚಿನ ಅಂಗ ನ್ಯೂನ್ಯತೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಸರಿಯಾಗಿ ಮಾರ್ಗಸೂಚಿ ಪ್ರಕಾರ ಅಂಗ ನ್ಯೂನ್ಯತೆ ನೀಡದೆ ಮತ್ತು ಯಾವ ಹಂತದಲ್ಲಿ ಅವರಿಗೆ ತಮ್ಮ ದಿನನಿತ್ಯದಲ್ಲಿ ಕೆಲಸದಲ್ಲಿ ತೊಂದರೆ ಆಗುತ್ತದೆ ಎಂದು ಸರಿಯಾಗಿ ಅಂಗ ನ್ಯೂನ್ಯತೆ ನೀಡಿಲ್ಲಾ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಕೆಳಗಿನ ಭಾಗಕ್ಕೆ ಮತ್ತು ಎಲ್ಲಾ ಸಂಪೂರ್ಣ ದೇಹಕ್ಕೆ ಎಷ್ಟು ನ್ಯೂನ್ಯತೆ ಇದೆ ಎಂದು ಬೇರೆ ಬೇರೆಯಾಗಿ ತಿಳಿಸಿಲ್ಲಾ ಎಂದರೆ ಸರಿ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನನೆಂದರೆ ಸರಿಯಲ್ಲ.

**ಮರು ವಿಚಾರಣೆ :ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ**